**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 940 /2023**

ಚಾಸಾ ಃ1

ಪ್ರಾಸಾ ಃ 1

ಸಾಕ್ಷಿಯ ಹೆಸರುಃ ಮೋಹನ್ ಕುಮಾರ್
ತಂದೆ /ಗಂಡನ ಹೆಸರು ಃ ಸಣ್ಣಮೊಗೇಗೌಡ
ವಯಸ್ಸು ಃ 31
ಉದ್ಯೋಗ ಃ ಪೇದೆ, ಶನಿವಾರಸಂತೆ ಪೋಲಿಸ್ ಠಾಣೆ
ವಾಸ ಸ್ಥಳ ಃ ಶನಿವಾರಸಂತೆ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ16.06.2025**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನಾನು **2016** ರಿಂದ **2024** ರವರೆಗೆ ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **29.03.2023** ರಂದು ಪೋಲಿಸ್ ಬಾತ್ಮಿದಾರರು ನಾನು ಠಾಣೆಯಲ್ಲಿರುವಾಗ ನನಗೆ ಕರೆ ಮಾಡಿ ಕೂಡುಮಂಗಳೂರಿನಲ್ಲಿರುವ ಜಯಮ್ಮನವರು ಅಕ್ರಮವಾಗಿ ಮದ್ಯ ಮಾರಾಟವನ್ನು ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು, ಅದನ್ನು ನಾನು ವಿಶೇಷವಾಗಿ ಠಾಣಾಧಿಕಾರಿಗಳಾದ ಚಾಸಾ **13** ರವರಿಗೆ ನೀಡಿರುತ್ತೇನೆ. ಕರೆ ಬೆಳಗ್ಗೆ **10.00** ಗಂಟೆಗೆ ಬಂದಿರುತ್ತದೆ. ನಾನು ಕಾನೂನು ಕ್ರಮ ಕೈಗೊಳ್ಳುವುದ್ದಾಕ್ಕಾಗಿ ಠಾಣೆಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ವರದಿಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ವರದಿಯನ್ನು ನಿಪಿ **1** ಎಂದು, ಸಾಕ್ಷಿಯ ಸಹಿಯನ್ನು ನಿಪಿ **1** ಎ ಎಂದು ಗುರುತಿಸಲಾಯಿತು. ನನ್ನ ವರದಿ ಮೇರೆಗೆ ಠಾಣಾಧಿಕಾರಿಗಳು ಠಾಣ ಗುನ್ನಾ ನಂ **37/2023** ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ . ನಂತರ **10.50** ಗಂಟೆಗೆ ನಾನು, ಚಾಸಾ **13** ರವರು , ಚಾಸಾ **2** ರವರು , ಚಾಸಾ **3** ರವರು ಮತ್ತು ಕೂಡುಮಂಗಳೂರು ವಾಸಿಗಳಾದ ಚಾಸಾ **4** ಮತ್ತು **5** ರವರನ್ನು ನಮ್ಮ ಜೊತೆ ಕರೆದುಕೊಂಡು ಹೋಗಿ ಕೂಡುಮಂಗಳೂರು ವಾಸಿಯಾದ ಜಯಮ್ಮ ರವರ

ಮನೆಗೆ ಹೋಗಿ ಪಂಚರ ಸಮಕ್ಷಮದಲ್ಲಿ ಮಹಜರ ಕ್ರಮ ಜರುಗಿಸಿರುತ್ತೇವೆ . ನಾವು ಆರೋಪಿಯಾದ ಜಯಮ್ಮರವರಿಗೆ ನೋಟಿಸು ನೀಡಿ ಅವರ ಅನುಮತಿ ಪಡೆದು ಮನೆಯನ್ನು ಸರ್ಚ್ ಮಾಡಿರುತ್ತೇವೆ . ಆರೋಪಿಯ ಮನೆಯ ಲಿವಿಂಗ್ ಹಾಲ ನ ದಿವಾನ್ ಕಾಟ್ ನ ಕಳೆಗಡೆ ಖಾಕಿ ಬಣ್ಣದ ಬಾಕ್ಸನಲ್ಲಿ **90** ಎಂ ಎಲ್ **48** ಟೆಟ್ರಾ ಪ್ಯಾಕೇಟುಗಳು ಕಂಡು ಬಂದಿರುತ್ತದೆ . ಅದರಲ್ಲಿ **28** ಮದ್ಯದ ಟೆಟ್ರಾ ಪ್ಯಾಕೇಟುಗಳನ್ನು ಕೆ ಆರ್ ಸೀಲ್ ನಮೂದಿಸಿ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ಆರ್ ಎಫ್ ಎಲ್ ಮೈಸೂರಿಗೆ ವರದಿಗಾಗಿ ಕಳುಹಿಸಿಕೊಟ್ಟಿರುತ್ತೇವೆ. ಇನ್ನು ಉಳಿದ **20** ಟೆಟ್ರಾ ಪ್ಯಾಕೇಟುಗಳನ್ನು ಹೆಚ್ಚಿನ ವಿಚಾರಣೆಗಾಗಿ ವಶಪಡಿಸಿಕೊಂಡಿರುತ್ತೇವೆ. ಟೆಟ್ರಾ ಪ್ಯಾಕ್‌ನೊಂದಿಗೆ ಒಂದು ಖಾಕಿ ಬಣ್ಣದ ಬಾಕ್ಸನ್ನು ವಶಪಡಿಸಿಕೊಂಡಿರುತ್ತೇವೆ. ಆ ಸಂದರ್ಬದಲ್ಲಿ ನಾನು , ಚಾಸಾ **13,** ಚಾಸಾ **2** ರಿಂದ **5** ರವರು ಇದ್ದರು. ಮಹಜರ ಮಾಡುವ ಸಮಯ ಸುಮಾರು ಬೆಳಗ್ಗೆ **11.10** ರಿಂದ **12.45** ಗಂಟೆ ಆಗಿರುತ್ತದೆ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ನಿಪಿ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿ **2**ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡ **90** ಎಂ ಎಲ್ ಒರಿಜನಲ್ ಚಾಯ್ಸ ಡೆಲಕ್ಸ ವಿಸ್ಕಿ ಕಂಪನಿಗೆ ಸೇರಿದ **28** ಮದ್ಯದ ಟೆಟ್ರಾ ಪ್ಯಾಕೇಟುಗಳನ್ನು ಮತ್ತು **1** ಖಾಕಿ ಬಾಕ್ಸ ನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ **28** ಟೆಟ್ರಾ ಪ್ಯಾಕೇಟುಗಳನ್ನು ಮು ಮಾ **1** ಎಂದು ಮತ್ತು **1** ಖಾಕಿ ಬಾಕ್ಸನ್ನು ಮು ಮಾ **2** ಎಂದು ಗುರುತಿಸಲಾಯಿತು.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.